ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಗೊತ್ತಿದ್ದೂ ಗೊತ್ತಿದ್ದೂ ಪದೇಪದೇ ಮಾಡುವ ತಪ್ಪು ಯಾವುದು?*



ಸೀರಿಯಲ್ ನೋಡುವುದು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಹೆಂಗಸರು ತುಂಬ ಖುಷಿಯಿಂದ, ಗಂಡಸರು ತುಂಬ ಖುಷಿಯಿಂದ ಮಾಡುವ ಕೆಲಸ ಯಾವುದು?*

ಹೆಂಗಸರು ಷಾಪಿಂಗ್; ಗಂಡಸರು ಷಾಪಿಂಗ್‌ಗೆ ಬಂದ ಇತರ ಹೆಂಗಸರನ್ನು ನೋಡುತ್ತಾ ಕೂಡುವುದು!

ನರಸಿಂಹ ಎಂ. ಪೈ, ಹೊನ್ನಾವರ

*ಮಾನವಜನ್ಮ ಬಹು ದೊಡ್ಡದು. ಏಕೆ?*

ಹತ್ತಾರು ಮೆಗಾ ಮೆಗಾ ಸೀರಿಯಲ್‌ಗಳು ಮುಗಿದರೂ ಮುಗಿಯದಷ್ಟು ದೊಡ್ಡ ಜನ್ಮವಾದ್ದರಿಂದ!

ಕೊ.ಸು. ನರಸಿಂಹಮೂರ್ತಿ, ಮೈಸೂರು

*ರಾಜಕೀಯಕ್ಕೆ ಗಣ್ಯವ್ಯಕ್ತಿಗಳ ವಿಧವಾ ಪತ್ನಿಯರನ್ನು ಎಳೆತರುವುದೇಕೆ?*



ಹೆಣ್ಣಿಗೆ ಗಂಡಿನ ಮತವನ್ನು, ಹೆಣ್ಣಿನ ಕಣ್ಣೀರಿಗೆ ಹೆಣ್ಣಿನ ಮತವನ್ನು ಸೆಳೆಯುವ ಶಕ್ತಿ ಇರುವುದರಿಂದ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ

*ಅನ್ಯಾಯ, ಅತ್ಯಾಚಾರಗಳು ಹೆಚ್ಚಾದಾಗಲೂ ಕಣ್ಮುಚ್ಚಿ ಕುಳಿತ ಶಿವನನ್ನು ನೋಡಿ ನೀನಿರುವುದನ್ನು ಸಾಬೀತುಪಡಿಸು ಎನ್ನುತ್ತೇನೆ. ನೀವು?*

ತೆರೆಸಬೇಕಾದ್ದು ಕಾನೂನಿನ ಕಣ್ಣನ್ನು, ಶಿವನ ಕಣ್ಣನ್ನಲ್ಲ; ಶಿಕ್ಷೆ ತೀವ್ರವಾದರೆ ರಕ್ಷೆ ತ್ವರಿತ.

ಆರ್. ಬಾಲರಾಜ್, ಯಲಹಂಕ

*ಹಿಂದಿನ ಮಕ್ಕಳು ತಾಯಿಯ ಮಡಿಲಿನಲ್ಲಿ ನಲಿಯುತ್ತಿದ್ದರು. ಇಂದಿನವರು...?*

ಕ್ರೀಚ್‌ನಲ್ಲಿ ಕಿರುಚಿ, ಮಾಂಟೆಸರಿಯಲ್ಲಿ ಮುಲುಗುತ್ತಿರುವರು.

ಚೈತ್ರಾ ಕುಕ್ಕೆಮನೆ, ಬೆಂಗಳೂರು

*ಆಡುವ ಪ್ರತಿ ಮಾತಿಗೂ ಬೇರೆಯೇ ಅರ್ಥ ತಿಳಿದುಕೊಳ್ಳುವ ಜನರಿಗೆ ಏನೆಂದು ಕರೆಯಬಹುದು ಸಾರ್?*

ವಿರೋಧಪಕ್ಷ!

ಮುರಲೀಧರ ಕುಲಕರ್ಣಿ, ಬೀದರ್

*ಸಾಲ ಮಾಡಬೇಡಿ ಎಂದಿದ್ದಾರೆ ಸರ್ವಜ್ಞ; ಸಾಲ ಮಾಡಿ ಎನ್ನುತ್ತವೆ ಬ್ಯಾಂಕುಗಳು. ನಾವು ಯಾರ ಮಾತು ಕೇಳಬೇಕು?*

ಮಾತು ಯಾರದ್ದನ್ನಾದರೂ ಕೇಳಿ, ಆದರೆ ಸಾಲ ಬೇಕಿದ್ದರೆ ಬ್ಯಾಂಕನ್ನೇ ಕೇಳಿ. ಮೀಟರ್ ಬಡ್ಡಿಗಿಂತ ಬ್ಯಾಂಕ್ ಬಡ್ಡಿಯೇ ಲೇಸು ಸರ್ವಜ್ಞ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಹೆಣ್ಣಿಗೆ ಗಂಡನ ಮನೆಯ ಬಾಗಿಲಿಗೂ, ತಂದೆಯ ಮನೆಯ ಬಾಗಿಲಿಗೂ ಏನು ವ್ಯತ್ಯಾಸ?*

ಒಂದು; ವಿವಾಹ ಆಗುವವರೆಗೆ ಖಾಯಂ, ಇನ್ನೊಂದು; ವಿವಾದ ಆಗುವವರೆಗೆ ಖಾಯಂ!

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ

*ಹಾವಿನ ಹೆಡೆಗೂ, ಹೆಣ್ಣಿನ ಜಡೆಗೂ ಏನು ವ್ಯತ್ಯಾಸ ಸಾರ್?*

ಅಯ್ಯೋ, ಈಗಿನ ಹೆಣ್ಣುಗಳು ಬಿಡಿಯಪ್ಪ! ಒಂದನ್ನು ಕಂಡರೆ ತತ್ತರಿಸುತ್ತಾರೆ, ಇನ್ನೊಂದನ್ನು ಕಂಡರೆ ಕತ್ತರಿಸುತ್ತಾರೆ!

ಕಾವ್ಯ ಶ್ರೀಧರ್ ಭಟ್ಟ, ಭಟ್ಕಳ

*ಗಂಡ ಮತ್ತು ಮಕ್ಕಳನ್ನು ಉಪವಾಸ ಇಟ್ಟು ಧಾರಾವಾಹಿಯನ್ನು ನೋಡುವ ಹೆಂಗಸರಿಗೆ ನಿಮ್ಮ ಸಲಹೆ ಏನು ರಾಂಜೀ?*

ಆಕೆಗೆ ಸಲಹೆಯೆ? ಛೆ! ಬಡಿಸಲೂ ಬಾರದ ಹೆಣ್ಣು ಬಡಬಡಿಸುವುದನ್ನು ಕೇಳಲು ಬರುವಳೆ?

ಕುಮಾರ ಚಲವಾದಿ, ಹೊಳೆನರಸಿಪುರ

*ಈ ಅಂಕಣಕ್ಕೆ ನಿಮ್ಮ ಪ್ರಿಯತಮೆ ಪ್ರಶ್ನೆ ಕಳಿಸಿದರೆ ನಿಮಗೇನು ಅನಿಸುತ್ತದೆ?*

'ಅಯ್ಯೋ! ಇಷ್ಟು ವರ್ಷ ಕೇವಲ ಹೆಂಡತಿ ಮಾತ್ರ ಪ್ರಶ್ನೆ ಕೇಳುತ್ತಿದ್ದಳು; ಈಗ ಇವಳೂ ಶುರು ಮಾಡಿಬಿಟ್ಟಳೇ' ಎಂದು!

## ಬಹುಮಾನಿತ ಪ್ರಶ್ನೆ

ಆರಿಫ್, ದಾವಣಗೆರೆ

*ಭೂಮಿ ಗುಂಡಾಗಿದೆ ಎಂಬುದನ್ನು ತಿಳಿಯುವುದು ಹೇಗೆ?*

ಒಂದು ಕ್ವಾರ್ಟರ್ ರಮ್ ಏರಿಸಿ; ಭೂಮಿ ಗುಂಡಾಗಿರುವುದಷ್ಟೇ ಅಲ್ಲ, ಗಿರ್‌ರ್‌ರ್ ಎಂದು ತಿರುಗುವುದೂ ತಿಳಿಯುತ್ತದೆ!

ಎಸ್.ಜಿ. ಕರನಂದಿ, ಹುನಗುಂದ

*ವಿದ್ಯುತ್‌ಗಿಂತ ತೀವ್ರ ನೋವು ನೀಡುವ ವಸ್ತು ಯಾವುದು?*

ಕರೆಂಟ್ ಬಿಲ್!

ಮಲ್ಲೇಶ ಕೆ, ಕೊಡಸೋಗೆ

*ಮರೆಗುಳಿತನಕ್ಕೆ ಮದ್ದೇನು?*

ಯಾವುದೇ ನೆನಪಿಸಿಕೊಳ್ಳುವಂತಹ ಕೆಲಸ ಮಾಡದಿರುವುದು.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಮನೆಯಿಂದ ಹೊರಡುವಾಗ 'ಎಲ್ಲಿಗೆ ಹೊರಟಿರಿ?' ಎಂದು ಕೇಳಬಾರದು ಎಂದು ಹೇಳುವುದೇಕೆ?*




'ನಾನೂ ಬರುತ್ತೇನೆ' ಎಂದು ವಕ್ಕರಿಸಿಕೊಂಡರೆ ಇರುಸುಮುರುಸು, ಡಬಲ್ ಖರ್ಚು, ಗುಟ್ಟು ರಟ್ಟು.....

ಎಲೆಮುದ್ದನಹಳ್ಳಿ ಸೋಮಶೇಖರ್, ಅಂಕನಹಳ್ಳಿ

*ಭಾರತವೇಕೆ ಫುಟ್‌ಬಾಲ್ ಆಟದಲ್ಲಿ ಹಿಂದುಳಿದಿದೆ?*

ಕಿಕ್‌ಗಿಂತಲೂ ಕಿಕ್‌ಬ್ಯಾಕ್‌ಗಳ ಬಗ್ಗೆ ಹೆಚ್ಚು ಗಮನ ಕೊಡುವುದರಿಂದ!

ಶೋಭಾ ಎಂ.ಆರ್. ಮರ್ಕುಲಿ

*ರೈತ, ಸೈನಿಕ, ಚಾಲಕ ಈ ಮೂವರೂ ನನ್ನ ಪ್ರಕಾರ ಒಂದೇ ಹಾಗೂ ಶ್ರೇಷ್ಠರು. ನೀವೇನಂತೀರಿ?*

ಶ್ರೇಷ್ಠರೆಂಬುದು ಸರಿಯೇ; ದೇಶದ ಲೆಕ್ಕದಲ್ಲಿ ರೈತ ಬೆನ್ನೆಲುಬು, ಸೈನಿಕ ಗುಂಡಿಗೆ, ಚಾಲಕ ಮೆದುಳು.

■ ರಾಮ್